## : ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ರಾಣೇಬೆನ್ನೂರು :

**: ಕ್ರ.ಸಂ. ಕೃಮಾಇ/ಕೃಉಮಾಸ(ರಾ)/ಸಾ.ನಿ/ಲೀ-ಕಂ-ಸೇ/ 1735 /2023-24, ದಿ : 12-02-2024.**

## : ನಿವೇಶನಗಳ ಲೀಜ್-ಕಂ-ಸೇಲ್ ಹಂಚಿಕೆಯ ತಿದ್ದುಪಡಿ ಪ್ರಕಟಣೆ :

ಹೂಲಿಹಳ್ಳಿ-ಕೂನಬೇವು (ಮೆಗಾ ಮಾರುಕಟ್ಟೆ) ಉಪ ಮಾರುಕಟ್ಟೆ ಪ್ರಾಂಗಣದ 'ಎ', 'ಬಿ', 'ಸಿ', 'ಡಿ' ಮತ್ತು 'ಇ' ಬ್ಲಾಕುಗಳಲ್ಲಿ ಖಾಲಿ ಇರುವ ವಿವಿಧ ಅಳತೆಯ 300 ಸಾಮಾನ್ಯ ನಿವೇಶನಗಳನ್ನು 10 ವರ್ಷಗಳ ಲೀಜ್ ಕಂ ಸೇಲ್ ಆಧಾರದ ಮೇಲೆ ಅರ್ಹ ಪೇಟೆ ಕಾರ್ಯಕಾರ್ತರುಳಿಗೆ ಹಂಚಿಕೆ ಮಾಡಲು 3 ನೇ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ದಿನಾಂಕ : 10-01-2024 ರ ಕೃಮಾಇ / ಕೃಉಮಾಸ / ರಾ / ಸಾ.ನಿ / ಲೀಕಂಸೇ / 1539 / 2023-24 ಕ್ರಮಾಂಕದ ನಿವೇಶನಗಳ ಲೀಜ್ ಕಂ ಸೇಲ್ ಹಂಚಿಕೆ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ.

ಸದರಿ ಪ್ರಕಟಣೆಯಲ್ಲಿ ಹಂಚಿಕೆ ಮಾಡಲು ಪರಿಗಣಿಸಲಾಗಿದ್ದ 'ಬಿ' ಬ್ಲಾಕಿನ 217 ಮತ್ತು 226 ನೇ ಸಂಖ್ಯೆಯ 02 ನಿವೇಶನಗಳನ್ನು ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದ ಹಂಚಿಕೆ ಪ್ರಕ್ರಿಯೆಯಿಂದ ಕೈಬಿಡಲಾಗಿದ್ದು, ಅವುಗಳ ಬದಲಿಗೆ ಅದೇ ಬ್ಲಾಕಿನ 120 ಮತ್ತು 142 ನೇ ಸಂಖ್ಯೆಯ 02 ನಿವೇಶನಗಳನ್ನು ಹಂಚಿಕೆಗೆ ಪರಿಗಣಿಸಲಾಗುವುದು.

ಅಲ್ಲದೇ ಹಂಚಿಕೆಗೆ ವಿಧಿಸಲಾಗಿರುವ ನಿಬಂಧನೆಗಳ ಪೈಕಿ 07 ನೇ ನಿಬಂಧನೆಗೆ ಹೊಸ ಅಂಶವನ್ನು ಸೇರ್ಪಡೆಮಾಡಲಾಗಿದ್ದು,16 ನೇ ನಿಬಂಧನೆಯನ್ನು ಇದೊಂದು ಬಾರಿ ಹಂಚಿಕೆಗೆ ಮಾತ್ರ ಸೀಮಿತಗೊಳಿಸಿ ಹಿಂಪಡೆಯಲಾಗಿರುವ ವಿವರ ಈ ಮುಂದಿನಂತೆ ಇರುತ್ತದೆ.

| ಪ್ರಕಟಣೆಯಲ್ಲಿನ ಷರತ್ತು-ವ-ನಿಬಂಧನೆಗಳ ಸಂಖ್ಯೆ | ಸೇರ್ಪಡೆ ಮಾಡಲಾಗಿರುವ ಹಾಗೂ ಹಿಂಪಡೆಯಲಾಗಿರುವ ನಿಬಂಧನೆಗಳ ವಿವರ |
|---|---|
| 07 | 'ಬಿ' ಬ್ಲಾಕಿನಲ್ಲಿ ಸ್ಥಳೀಯ ವರ್ತಕರಿಗೆ ಕಾಯ್ದಿರಿಸಿರುವ ಶೇ. 60 ರಷ್ಟು ನಿವೇಶನಗಳ ಹಂಚಿಕೆಗೆ ಪರಿಗಣಿಸುವ ಮಾನದಂಡದಲ್ಲಿ ಅರ್ಜಿದಾರನು ಒಣಮೆಣಸಿನಕಾಯಿ ವಹಿವಾಟನ್ನು ಮಾತ್ರ ಮಾಡುತ್ತೇನೆಂದು ಸಮಿತಿಗೆ ಮನವಿ / ದೃಢೀಕರಣ ನೀಡಿದಲ್ಲಿ ಅದನ್ನು ಪರಿಗಣಿಸಿ ಜೇಷ್ಠತೆಗೆ ಪರಿಗಣಿಸುವ ಮಾರುಕಟ್ಟೆ ಶುಲ್ಕವನ್ನು ನಿಯಮ 8 ರನ್ವಯ ಸದರಿ ಅರ್ಜಿದಾರನು ಸಮಿತಿಗೆ ಸಂದಾಯ ಮಾಡಿರುವ ಒಟ್ಟಾರೆ ಮಾರುಕಟ್ಟೆ ಶುಲ್ಕವನ್ನು ಆಧರಿಸಿ ಹಂಚಿಕೆ ಮಾಡಲಾಗುವುದು. |
| 16 | ಘನ ನ್ಯಾಯಾಲಯದ ಆದೇಶದಂತೆ ಹೆಚ್ಚುವರಿ ಭೂ ಪರಿಹಾರ ಪಾವತಿಸಿದಲ್ಲಿ ಅದನ್ನು ಹಂಚಿಕೆ ಪಡೆದ ಪೇಟೆಕಾರ್ಯಕರ್ತರು ವಿಸ್ತೀರ್ಣಕ್ಕನುಗುಣವಾಗಿ ಪಾವತಿ ಮಾಡಲು ಬದ್ಧರಾಗಿರತಕ್ಕದ್ದು ಹಾಗೂ ಬದ್ಧರಾಗಿರುವ ಬಗ್ಗೆ ಅರ್ಜಿಯೊಂದಿಗೆ ಪ್ರಮಾಣ ಪತ್ರವನ್ನು ಸಲ್ಲಿಸುವುದು ಎಂಬ ನಿಬಂಧನೆಯನ್ನು ಇದೊಂದು ಬಾರಿಗೆ ಸೀಮಿತಗೊಳಿಸಿ ಹಿಂಪಡೆಯಲಾಗಿದೆ. |

ನಿವೇಶನಗಳ ಹಂಚಿಕೆಗೆ ನೊಂದಣಿ ಮಾಡಿಸಲು, III ನೇ ನಮೂನೆಯ ಖಾಲಿ ಫಾರಂಗಳಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ III ನೇ ನಮೂನೆಗಳನ್ನು ಸಮಿತಿಗೆ ಸಲ್ಲಿಸಲು ನಿಗದಿಪಡಿಸಲಾಗಿದ್ದ 14-02-2024 ನೇ ಅಂತಿಮ ದಿನವನ್ನು 23-02-2024 ದಿನಾಂಕದವರೆಗೆ ವಿಸ್ತರಿಸಲಾಗಿದೆ. ವರ್ತಕರುಗಳು ಸದರಿ ಮಾಹಿತಿಯನ್ನು ಗಮನಿಸಿ ನಿವೇಶನ ಹಂಚಿಕೆಗೆ ಅರ್ಜಿ ಸಲ್ಲಿಸುವುದು. ಉಳಿದ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/-
ಕಾರ್ಯದರ್ಶಿ,
ಕೃಉಮಾಸ, ರಾಣೇಬೆನ್ನೂರು.

ಸಹಿ/-
ಆಡಳಿತಾಧಿಕಾರಿಗಳು,
ಕೃಉಮಾಸ, ರಾಣೇಬೆನ್ನೂರು.

'ಯಥಾ ಪ್ರತಿ'

Shylaja MV

ಕಾರ್ಯದರ್ಶಿ,
ಕೃ. ಉ.ಮಾ. ಸ., ರಾಣೇಬೆನ್ನೂರು